8. ನೇರ ನೆರವು ಯೋಜನೆಯಡಿ ಹುಳುಸಾಕವುದು ಮನೆ ನಿರ್ಮಾಣಕ್ಕೆ ಶೇ. 50ರಂತೆ ಸಹಾಯಧನ ನೀಡಲಾಗುವುದು(23500-00)

9. ರೇಷ್ಮೆ ಬೆಳೆಗಾರರ ಗೂಡಿಗೆ ಪ್ರತಿ ಕೆ.ಜಿ.ಗೆ ರೂ. 5.00 ರಂತೆ (ಮಹಿಳಾ ಫಲಾನುಭವಿಗೆ ರೂ 10.00 ರಂತೆ) ಪ್ರೋತ್ಸಾಹಧನ ನೀಡಲಾಗುವುದು.

10. ರೇಷ್ಮೆ ಬೆಳೆಗಾರರು ಬೆಳೆದ ದ್ವಿತಳಿ ಬಿತ್ತನೆ ಗೂಡನ್ನು ಬೇಡಿಕೆ ಇಲ್ಲದ ರೀಲಿಂಗ್‌ಗಾಗಿ ಮೂರಾಟ ಮಾಡಿದಾಗ ಬಿತ್ತನೆ ಮತ್ತು ರೀಲಿಂಗ್ ದರದ ವ್ಯತ್ಯಾಸದ ಹಣವನ್ನು ಭರಿಸಿಕೊಡಲಾಗುತ್ತದೆ.

ಶಿವಮೊಗ್ಗ ನಗರ ಸ್ವಚ್ಛತೆ ಕಾರ್ಯಗಳು

258 (26) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಶಿವಮೊಗ್ಗ ನಗರ ನೈಮರಲ್ಯದ ಬಗ್ಗೆ ನಗರಸಭೆವತಿಯಿಂದ ಖಾಸಗಿಯವರಿಗೆ ಸ್ವಚ್ಛತೆ ಬಗ್ಗೆ ಟೆಂಡರ್ ಕೊಡಲಾಗಿದೆಯೇ ಯಾವ ಆಧಾರದ ಮೇಲೆ ಟೆಂಡರ್ ಕೊಡಲಾಗುತ್ತಿದೆ; ಹಾಲಿ ಇರುವ ಪೌರ ಕಾರ್ಮಿಕರ ಕೆಲಸಗಳೇನು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು)

ಅ) ಶಿವಮೊಗ್ಗ ನಗರಸಭೆ ವ್ಯಾಪ್ತಿಯ 35 ವಾರ್ಡ್‌ಗಳ ಪೈಕಿ ನಗರದ ಮಧ್ಯ ಭಾಗದಲ್ಲಿ ಬರುವ ಹೆಚ್ಚಿನ ಜನಸಾಂದ್ರತೆಯುಳ್ಳ ಮಾರುಕಟ್ಟೆ ಹಾಗೂ ವಾಣಿಜ್ಯ ಪ್ರದೇಶಗಳನ್ನೊಳಗೊಂಡಿರುವ 12 ವಾರ್ಡ್‌ಗಳಲ್ಲಿ ಸ್ವಚ್ಛತಾ ಕಾರ್ಯಕ್ಕಾಗಿ ಖಾಸಗಿಯವರಿಗೆ ಗುತ್ತಿಗೆಗೆ ನೀಡಲಾಗಿದೆ.

ಪೌರ ಕಾರ್ಮಿಕರ ಕೊರತೆಯಿಂದಾಗಿ ಸ್ವಚ್ಛತೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸರ್ಕಾರದ ಆದೇಶ ಸಂಖ್ಯೆ ನಇ 28 ಎಸ್‌ಜಿಪಿ 94 ದಿನಾಂಕ: 19-3-94ರ ಮೇರೆಗೆ ಗುತ್ತಿಗೆಗೆ ನೀಡಲಾಗಿದೆ.

ಹಾಲಿ ಶಿವಮೊಗ್ಗ ನಗರಸಭೆಯಲ್ಲಿ 325 ಜನ ಪೌರ ಕಾರ್ಮಿಕರಿದ್ದು ಇವರನ್ನು ಹೊಸದಾಗಿ ನಗರಸಭೆಯ ವ್ಯಾಪ್ತಿಗೆ ಸೇರಿರುವ ಹಳ್ಳಿಗಳಲ್ಲಿ ಸ್ವಚ್ಛತಾ ಕಾರ್ಯಕ್ಕಾಗಿ ನಿಯೋಜಿಸಲಾಗಿದೆ. ಗುತ್ತಿಗೆಗೆ ನೀಡಿರುವ ವಾರ್ಡ್‌ಗಳಲ್ಲಿ ಸ್ವಚ್ಛತಾ ಕಾರ್ಯ ಮಾಡುತ್ತಿದ್ದ ಪೌರ ಕಾರ್ಮಿಕರನ್ನು ಬೇರೆ ಬೇರೆ ವಾರ್ಡ್‌ಗಳಲ್ಲಿ ಸ್ವಚ್ಛತಾ ಕಾರ್ಯಕ್ಕಾಗಿ ನಿಯೋಜಿಸಲಾಗಿದೆ.

ವಸತಿ ನಿಲಯಗಳ ಕಾರ್ಯ

259 (541) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ):- ಮಾನ್ಯ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗಗಳ ಅಭ್ಯರ್ಥಿಗಳಿಗೆ ಎಷ್ಟು ವಸತಿ ನಿಲಯಗಳನ್ನು ತೆರೆಯಲಾಗಿದೆ. ಅದು ಯಾವುದು ಮತ್ತು ಎಲ್ಲಿ ಕಾರ್ಯನಿರ್ವಹಿಸುತ್ತಿದೆ.